'ತಮ್ಮನ ಹೆಂಡ್ತೀನ ಕೇಳಿ. ದಿನ ಒಗ್ಗ್ಯೋ ಕಲ್ಮೇಲೇ ಹಗ್ಗಾನ ಇಡ್ತಿದ್ಳು. ಈವತ್ತು ನಾವು ತಕೋಳ್ತೀವಿ ಅಂತ ಪುಣ್ಯಾತ್ಗಿತ್ತಿ, ಒಳಗೆ ತಕ್ಕೊಂಡು ಹೋದ್ಳು.' ಆಗ ಅವನ ತಮ್ಮನ ಹೆಂಡತಿ, ಹಗ್ಗವನ್ನು ಒಗೆಯುವ ಕಲ್ಲಿನ ಮೇಲೆ 'ದೊಪ್' ಎಂದು ತಂದು ಹಾಕಿ ಒಳಗೆ ಹೋದಳು.

'ನೋಡಿದ್ರಾ, ಹೇಗೆ ತಂದು ಬಿಸಾಕ್ತಿದ್ದಾಳೆ ಅಂತ? ನೀವು ಇಲ್ಲಿ ಸ್ನಾನ ಮಾಡ್ಬೇಡಿ. ಕೆರೆಗೆ ಹೋಗಿ...'

'ಮಾನ ಮರ್ಯಾದೆ ಅಂತಾ ಕೂತಿದ್ರೆ ನಮ್ಮಿಂದ ಇರೋದಿಕ್ಕೆ ಆಗುತ್ಯೇನೇ? ಎಲ್ಲವನ್ನೂ ಯಾವಾಗ್ಲೋ ತೊಡೆದು ಹಾಕಾಯ್ತು' ಎಂದು ಹೇಳುತ್ತಲೇ ಹಗ್ಗವನ್ನು ರಾಟೆಗೆ ಸಿಗಿಸಿದ ರಾಜಪ್ಪ.

ನಾಲ್ಕು ಬೇಲಿ 'ಮಿರಾಸು' ರಾಜಗೋಪಾಲ್ ಅಯ್ಯಂಗಾರರು ತಮ್ಮ ಮೊಮ್ಮಗ, ಉಳಿದ ಪಿತೃಗಳ ಪ್ರತಿನಿಧಿಯಾಗಿ ಇದ್ದು ಅವರ ಹಸಿವನ್ನು ಹಿಂಗಿಸುತ್ತಾನೆ ಎಂದು ನಿರೀಕ್ಷಿಸಿದ್ದರಾ? ಅಥವಾ ಅವನ ಅಪ್ಪನಾದರೂ ಇದನ್ನು ಊಹಿಸಿರುತ್ತಾರೆಯೇ? ಹಾಗೆ ನೋಡಿದರೆ ಅವನ ಈಗಿನ 'ಉದ್ಯೋಗ' ಅವನಿಗೇ ಆಶ್ಚರ್ಯ ತರುವ ವಿಷಯ. ಅಮ್ಮ ಹೋದಮೇಲೆ ಹೊಟ್ಟೆಯ ಸಮಸ್ಯೆ ಎದುರಾದಾಗ ಕುಪ್ಪು ಮೇಷ್ಟ್ರು ಅವನನ್ನು ಈ ದಂಧೆಗೆ ನೂಕಿದರು. ಅದಕ್ಕಾಗಿ ಅವನು 'ವೇಷ' ಧರಿಸುವುದು ಅನಿವಾರ್ಯವಾಯಿತು. ಕ್ರಾಪ್ ಹೋಗಿ ಜುಟ್ಟು ಬಂತು. ಸುಮ್ಮನೆ ಸುತ್ತಿಕೊಳ್ಳುವ ಪಂಚೆ ಈಗ ಕಚ್ಚೆಪಂಚೆಯಾಯಿತು. ಹಣೆಯಲ್ಲಿ 'ಫಳ್' ಎಂದು ನಾಮ. ಅವನ ತಮ್ಮನಿಗೆ ಮೊದಲಿಂದಲೂ ಇದು ಹಿಡಿಸಲಿಲ್ಲ. ಆದರೆ ಆಕ್ಷೇಪಿಸಿದರೆ ತನಗೇ ಕಿರುಕುಳ ಎಂದು ಹೆದರಿ ಸುಮ್ಮನಿದ್ದ.

ರಾಜಪ್ಪ ಸ್ನಾನ ಮುಗಿಸಿ ಒಳಗೆ ಹೋದಾಗ. ರುಕ್ಕು ಅಡಿಗೆ ಮಾಡುತ್ತಿದ್ದಳು.

'ಏನು ಅಡಿಗೆ?' ಎಂದು ಕೇಳಿದ ರಾಜಪ್ಪ.

'ಅನ್ನ ಆಯ್ತು. ನಿನ್ನೆಯ ತಿಳಿಸಾರಿದೆ. ಹಪ್ಪಳ ಕರೀಬೇಕು.'

'ಕಾಫಿ ಸಿಗುತ್ತಾ?' ರುಕ್ಕು ಕಾಫಿಪುಡಿಯ ಡಬ್ಬವನ್ನು ಮಗುಚಿ ತೋರಿಸಿದಳು.

'ನಾನು ಹಪ್ಪಳ ಕರೀತೀನಿ. ನೀನು ಕುಪ್ಪು ಮೇಷ್ಟ್ರ ಮನೆಯಿಂದ...'

'ನಾನು ಯಾರ ಮನೆಗೂ ಹೋಗಿ ಕಾಫಿ ಪುಡಿ ತರೋದಿಲ್ಲ.'

'ಕಾಫಿ ಕುಡೀದೇ ಹೇಗೇಗೋ ಆಗ್ತಿದೆ ಕಣೇ.'

'ಆಮೇಲೆ ಇನ್ನೊಬ್ರ ಮನೆಗೆ ಹೋಗಿ ಸಕ್ರೆ ತರಬೇಕು. ಅದಕ್ಕೆ ಬದಲು ನೀವೇ ಯಾರ ಮನೆಗಾದರೂ ಹೋಗಿ ಕಾಫಿ ಕುಡೀರಿ. ನೀವು ಹಪ್ಪಳ ಕರಿಯೋದೇನೂ ಬೇಡ. ನಾನೇ ಕರೀತೀನಿ.'

ರಾಜಪ್ಪನಿಗೆ ಒಂದೇ ಉರಿ. ಯಾರ ಮೇಲೆ ಕೋಪಿಸಿಕೊಳ್ಳಲು ಸಾಧ್ಯ?

ಕಾಫಿ ಕುಡಿಯಬೇಕೆಂಬ ಆವೇಶ ಅವನೊಳಗೆ ಉಂಟಾಯಿತು. ಹೊರಗೆ ಹೋದರೆ ಯಾರಾದರೂ ಸಿಗಬಹುದಲ್ಲವೇ?

ಅಭಿರಾಮಿ ಮನೆಗೆ ಹೋಗಿ, 'ವೈದೇಹಿ ಬಂದಿದ್ದಾಳೆಯೇ ಎಂದು ವಿಚಾರಿಸಲು ಬಂದೆ' ಎಂದು ಕೇಳಿ ಸ್ವಲ್ಪ ಹೊತ್ತು ಅಲ್ಲಿ ಹಿಂಜರಿಯುತ್ತ ನಿಂತರೆ, ಕಾಫಿ ಸಿಗಬಹುದು. ರಿಟೈರ್ಡ್ ಎಂಜಿನಿಯರ್ ರಾಮದೇಶಿಕನ ಮನೆಗೆ ಹೋಗೋಣ ಅಂದರೆ, ಅವರು ಮಗಳ ಮನೆಗೆ ಕುಂಭಕೋಣಮ್‌ಗೆ ಹೋಗಿದ್ದಾರೆ. ಕಾಲಕ್ಕೆ ತಕ್ಕಂತೆ ಈ ದೇವಸ್ಥಾನದಲ್ಲಿ ಪೆರುಮಾಳಿಗೆ ಕಾಫಿ ನೈವೇದ್ಯ ಮಾಡಕೂಡದೇ? ಶ್ರೀರಂಗದಲ್ಲಿ ರಂಗನಾಥನಿಗೆ ರೊಟ್ಟಿ ಕೊಡುತ್ತಾರೆ. ಈ ಊರಿನ ಪೆರುಮಾಳಿಗೆ ಕಾಫಿ ಕುಡಿಯುವ ಒಬ್ಬ ನಾಚ್ಚಿಯಾರ್ ಇದ್ದಿದ್ದರೇ, ಎಷ್ಟು ಚೆನ್ನಾಗಿ ಇರುತ್ತಿತ್ತು? ದೇವಸ್ಥಾನದಲ್ಲಿ ದಿನವೂ ಕಾಫಿ ಪ್ರಸಾದವಾದರೂ ದೊರಕುತ್ತಿತ್ತಲ್ಲವೇ!

'ನೀವು ಈಗ ಊಟ ಮಾಡ್ತೀರಾ?' ಎಂದು ರುಕ್ಕು ಕೇಳಿದಳು.

'ಇಷ್ಟು ಬೇಗನಾ? ನಾನು ಸ್ವಲ್ಪ ಹೊರಗೆ ಹೋಗಿ ಬರ್ತೀನಿ.'

ರಾಜಪ್ಪ ಮನೆಯಿಂದ ಹೊರಗೆ ಬಂದು ರಸ್ತೆಯ ಎರಡೂ ದಿಕ್ಕುಗಳನ್ನು ನೋಡಿದ. ಕಾಫಿಗೆ